within 1½ hours and transfer of ration card will be done within two hours. In the case of issue of new ration card, 20 days time will be given and it will be issued on the due date. After examining the result of this system, extension to other informal rationing areas will be considered in a phased manner.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ....ಇವೆಲ್ಲಾ ಬರೇ ರೂಲ್ಸ್‌ನಲ್ಲಿದೆ. ಪ್ರಾಕ್ಟಿಕಲ್ ಆಗಿ ಅಲ್ಲಿ ಓಡಾಡುತ್ತಿರುವವರಿಗೆ ಎಷ್ಟು ಡಿಲೇ ಆಗುತ್ತದೆ ಎಂದು ಗೊತ್ತು. ಆದುದರಿಂದ ಸಿಂಗಲ್ ವಿಂಡೋ ಸಿಸ್ಟಂ ಅನ್ನು ಆದಷ್ಟು ಬೇಗ ಇಡೀ ರಾಜ್ಯದಲ್ಲಿ ಇಂಟ್ರೊಡ್ಯೂಸ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಆದರಲ್ಲಿ ಬೆಂಗಳೂರಿಗಾದರೂ ಬೇಗ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆಜೀಜ್ ಸೇಠ್.—ತಾವು ಹೇಳುವುದರಲ್ಲಿ ಏನೂ ಅನುಮಾನ ಇಲ್ಲ. ಮಾಡುವುದಕ್ಕೆ ಸ್ವಲ ಫೈನಾನ್ಸಿಯಲ್ ಕನ್‌ಸ್ಟ್ರೇಂಟ್ಸ್ ಇರುವುದರಿಂದ ಸ್ವಲ್ಪ ಹಿಂದೆ ಮುಂದೆ ನೋಡುತ್ತಿದ್ದೇವೆ.

ಧಾರವಾಡ ಜಿಲ್ಲೆಯ ಸೆರವಾಡ ಮತ್ತು ಸವಣೂರು ರಸ್ತೆಯ ದುರಸ್ತಿ

೯೬೦. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಧಾರವಾಡ ಜಿಲ್ಲೆಯ ಶಿರವಾಡ–ಸವಣೂರ ರಸ್ತೆಯನ್ನು ದುರಸ್ತಿ ಮಾಡಲು ಸಾಕಷ್ಟು ಹಣವಿಲ್ಲವೆಂದು ಹೇಳಿ ಸರ್ಕಾರವೇ ಈ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತು ನಿರ್ಣಯ ಮಾಡಿ ಕಳುಹಿಸಿರುವುದು ನಿಜವೇ ?

(ಆ) ಹಾಗಿದ್ದರೇ ಯಾವಾಗ ನಿರ್ಣಯವನ್ನು ಕಳುಹಿಸಿದೆ ?

(ಇ) ಸರ್ಕಾರವು ಈ ಮಾರ್ಗಗಳನ್ನು ದುರಸ್ತಿ ಮಾಡಲು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

(ಅ) ಧಾರವಾಡ ಜಿಲ್ಲಾ ಪರಿಷತ್ತು ಈ ರೀತಿಯ ಯಾವುದೇ ನಿರ್ಣಯ ಮಾಡಿರುವುದಿಲ್ಲ. ಆದರೆ ಸದರಿ ರಸ್ತೆಯನ್ನೂ ಸೇರಿದಂತ ಹಲವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಧಾರವಾಡ ಜಿಲ್ಲಾ ಪರಿಷತ್ತು ಕಾಮಗಾರಿ ಸ್ಥಾಯಿ ಸಮಿತಿಯು ೧೧–೧೨–೧೯೮೯ ರಂದು ನಿರ್ಣಯವನ್ನು ಅಂಗೀಕರಿಸಿದೆ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಸದರಿ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ,ಹಸ್ತಾಂತರಿಸುವ ವರೆವಿಗೂ ಜಿಲ್ಲಾ ಪರಿಷತ್ತಿನವರೇ ತಮ್ಮ ವ್ಯಾಪ್ತಿಯ ರಸ್ತೆಗಳನ್ನು ನಿರ್ವಹಣೆ ಮಾಡಬೇಕಾಗುತ್ತದೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿರುವ ಹಾಗೆ, ಜಿಲ್ಲಾ ಪರಿಷತ್ ಧಾರವಾಡದವರು ಸೆರೆವಾಡ–ಸವಣೂರು ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಳ್ಳಬೇಕು ಎಂದು ೧೧–೧೨–೧೯೮೯ ರಂದು ಕಾಮಗಾರಿ ಸ್ಥಾಯಿ ಸಮಿತಿಯವರು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆ ಮಾನ್ಯ ಲೋಕೋಪಯೋಗಿ ಸಚಿವರು ತಮ್ಮ ಇಲಾಖೆಗೆ ಆ ರಸ್ತೆಯನ್ನು ತೆಗೆದುಕೊಂಡು ಶೀಘ್ರಗತಿಯಿಂದ ರಿಪೇರಿ ಮಾಡುವಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ನಾನು ಅವರಿಗೆ ಕೇಳುತ್ತೇನೆ. ಮೊದಲು ಆ ರಸ್ತೆಯನ್ನು ಈ ಇಲಾಖೆಗೆ ತೆಗೆದುಕೊಳ್ಳಬೇಕು. ಇದರಲ್ಲಿ ದರ್ಜೆ ಪ್ರಶ್ನೆ ಇಲ್ಲ. ಅದನ್ನು ರಿಸ್ಟಿಕ್ಟ್ ರೋಡ್ ಮಾಡಲಿ ಅಥವಾ ಸ್ಟೇಟ್ ರೋಡ್ ಮಾಡಲಿ. ಒಂದು ತಿಂಗಳಲ್ಲಿ ಆಗಬೇಕು. ನಿನ್ನೆ ತಮ್ಮ ಮುಂದೆ ನಾನು ಈ ವಿಷಯವನ್ನು ತಂದಿದ್ದೆ. ಮಾನ್ಯ ಗ್ರಾಮಾಭಿವೃದ್ಧಿ ಸಚಿವರು ರೆಸಲ್ಯೂಷನ್ ಆಗಿಲ್ಲ ಎಂದು ಹೇಳಿದರು. ಈಗ ತಾವು ಮಾಡಿ ಕಳಿಸಿದ್ದಾರೆ ಎಂದು ಹೇಳುತ್ತಿದ್ದೀರಿ. ದಯವಿಟ್ಟು ತಾವು ಇದನ್ನು ಸ್ವಲ್ಪ ನೋಡಬೇಕು.

ಶ್ರೀ ಜೆ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಈ ರಸ್ತೆ ದುರಸ್ತಿ ಕಾರ್ಯವನ್ನು ಸರ್ಕಾರವೇ ಮಾಡಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತಿನವರು ನಿರ್ಣಯ ಮಾಡಿ ಕಳಿಸಿರುವುದು ನಿಜವೇ ಎಂದು ಇದೆ. ಆದರೆ ಇದನ್ನು ಮೇಲ್ದರ್ಜೆಗೆ ಏರಿಸಿ ನೀವು ವಹಿಸಿಕೊಳ್ಳಿ

ಎಂದು ನಿರ್ಣಯ ಮಾಡಿದ್ದಾರೆ. ಆ ಪ್ರಸ್ತಾವನೆ ನಮ್ಮ ಸರ್ಕಾರದ ಪರಿಶೀಲನೆಯಲ್ಲಿದೆ, ತಕ್ಷಣ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಆ ರಸ್ತೆಯನ್ನು ಈಗ ನೀವು ತೆಗೆದುಕೊಳ್ಳಿ, ನಂತರವಾದರೂ ಮಾಡಿಕೊಡಿರಿ.

(ಉತ್ತರವಿಲ್ಲ)

ಅಧ್ಯಕ್ಷರು.—ಈಗ ಪ್ರಶ್ನೆ ಕಾಲ ಮುಗಿಯಿತು. ಈಗ ಶಾರ್ಟ್ ನೋಟೀಸ್ ಕೊಶ್ಚನ್, ಶ್ರೀ ಮಲ್ಲಿಕಾರ್ಜುನ ಖರ್ಗೆಯವರು.

ಅಲ್ಪ ಕಲಾವಧಿ ಪ್ರಶ್ನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರ ಒದಗಿಸಿಲ್ಲ. 'ಎ'ಗೆ ನಿಮ್ಮದು ಉತ್ತರ ಇಲ್ಲ, 'ಬಿ'ಗೆ ಉತ್ತರ ಏನಿಲ್ಲ, ಬರೀ ಒಂದು ಸ್ಟೇಟ್‌ಮೆಂಟ್ ಟೈಪ್ ಇದೆ. ಅದನ್ನು ಉತ್ತರ ಎಂದು ಹೇಗೆ ತಿಳಿದುಕೊಳ್ಳುವುದು. ನನ್ನ ಕೊಶ್ಚನ್ ಈ ರೀತಿ ಇದೆ. Whether the Government is going to implement Justice O. Chinnappa Reddy's report on Backward Classes from the academic year 1990-91 ? ಇದಕ್ಕೆ 'ಎಸ್' ಅಥವಾ 'ನೋ' ಎಂದು ಇದರಲ್ಲಿಲ್ಲ. ನೀವು ಸುಮ್ಮನೆ ಕೊಟ್ಟಿದ್ದೀರಿ. If so, when the Government will issue the order to give benefit to the students particularly in professional courses ? ಎಂದು ಇದೆ. ಅದಕ್ಕೂ ಏನೂ ಉತ್ತರವಿಲ್ಲ. ಅದಕ್ಕೆ ನಾನು ಕೇಳುವುದು ಏನೆಂದರೆ, ಸ್ಪಷ್ಟವಾಗಿ ಸರ್ಕಾರದ ನಿಲುವು ಏನಿದೆ ಈ ವರ್ಷ ಅದನ್ನು ಇಂಪ್ಲಿಮೆಂಟ್ ಮಾಡುತ್ತೀರೊ ಹೇಗೆ ? ಮತ್ತೆ ಬ್ಯಾಕ್‌ವರ್ಡ್‌ಕ್ಲಾಸ್‌ನಲ್ಲಿ ಕೆಲವು ಕಮ್ಯೂನಿಟಿಗಳು ಬಿಟ್ಟು ಹೋಗಿವೆ, ಅವನ್ನೂ ಕೂಡ ಸೇರಿಸುತ್ತೀರೊ ಹೇಗೆ ಮತ್ತು ಇಂಪ್ಲಿಮೆಂಟ್ ಮಾಡಬೇಕಾದರೆ ಎಷ್ಟು ದಿವಸಗಳೊಳಗೆ ತಾವು ನಿರ್ಣಯ ತೆಗೆದುಕೊಳ್ಳುತ್ತೀರಿ ಎನ್ನುತಕ್ಕಂಥಾದ್ದು ಬಹಳ ಮುಖ್ಯ. ಈಗ ಏನಾಗಿದೆಯೆಂದರೆ, ಯಾವುದೇ ಕಮಿಟಿ ರಿಪೋರ್ಟ್ ಬರಲಿ, ಅದಕ್ಕೆ ಆಪೊಸಿಷನ್ ವೆಂಕಟಸ್ವಾಮಿ ಆಯೋಗದ ರಿಪೋರ್ಟ್ ಬಂತು ಅದಕ್ಕೆ ಆಪೊಷಿಷನ್, ಚಿನ್ನಪ್ಪರೆಡ್ಡಿ ಆಯೋಗದ ರಿಪೋರ್ಟ್ ಬಂತು, ಅದಕ್ಕೆ ಆಪೊಸಿಷನ್. ಉರ್ದುವಿನಲ್ಲಿ ಗಾದೆ ಇದ್ದಹಾಗೆ ಯಾರ ಕೈಯಲ್ಲಿ ದೊಣ್ಣೆ ಇರುತ್ತದೆ ಅವನದೇ ದನ ಆಗುವುದು ಅಥವಾ ಅವನದೇ ಎಮ್ಮೆ ಆಗುವುದು; ಹಾಗೆ ಆಗಿದೆ ಇವತ್ತು. ಆದುದರಿಂದ ನಿಜವಾದಂಥ ಬ್ಯಾಕ್‌ವರ್ಡ್‌ಕ್ಲಾಸ್ ಜನರಿಗೆ ಬೆನಿಫಿಟ್ ಆಗುವುದಕ್ಕೆ ತಾವು ಏನಂ ಕ್ರಮ ತೆಗೆದುಕೊಳ್ಳುತ್ತೀರಿ. ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ ಮತ್ತು ನಿಜವಾದಂಥ ಕೆಲವು ಕಮ್ಯೂನಿಟಿಗಳು ಬಿಟ್ಟು ಹೋದಂಥವನ್ನೂ ಪುನರ್‌ಪರಿಶೀಲನೆ ಮಾಡಿ ಅವನ್ನೂ ಕೂಡ ಸೇರಿಸಿ ಏನಾದರೂ ಹೊಸ ಗವರ್ನಮೆಂಟ್ ಆರ್ಡರನ್ನು ಇಷ್ಯೂ ಮಾಡುತ್ತೀರೊ ಹೇಗೆ? ಆದುದರಿಂದ ಇದರ ಬಗ್ಗೆ ತಮ್ಮ ಸ್ಪಷ್ಟವಾದಂಥ ನಿಲುವನ್ನು ಹೇಳಿದರೆ ಈ ದೇಶದ ಜನತೆಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ, ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಆಧಾರದ ಮೇಲೆ ಆರ್ಡರ್ ಬರಂತ್ತದೋ ಅಥವಾ ವೆಂಕಟಸ್ವಾಮಿ ಆಯೋಗದ ವರದಿಯ ಮೇಲೆ ಆರ್ಡರ್ ಬರುತ್ತದೊ ಎಂದು ಅಲ್ಲೇ ಜನ ಕೂಡುತ್ತಾರೆ ಅಲ್ಲದೆ ಬೇರೆಯವರು ಅದರೊಳಗೆ ಸೇರಿ ಬೆನಿಫಿಟ್ ಪಡೆಯುವಂಥಾದ್ದು ಆಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರದ ನಿಲುವು ಏನಿದೆ ಎನ್ನುವುದನ್ನು ಹೇಳಿದರೆ ಈ ವರ್ಷ ಬೆನಿಫಿಟ್ ಸಿಕ್ಕುವುದಿಲ್ಲ, ಕನಿಷ್ಟಪಕ್ಷ ಮುಂದಿನ ವರ್ಷ ಸಿಗುತ್ತದೆ ಎಂದು ಜನರಿಗೆ ಗೊತ್ತಾಗಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಚಿನ್ನಪ್ಪರೆಡ್ಡಿ ಆಯೋಗದ ವರದಿ ಸರ್ಕಾರಕ್ಕೆ ಒಂದಕೂಡಲೆ ನಾವು ಅದನ್ನು ಸಚಿವ ಸಂಪುಟಕ್ಕೆ ಒಪ್ಪಿಸಿದೆವು. ತಡಮಾಡಲಿಲ್ಲ. ಆಮೇಲೆ ಸಚಿವ ಸಂಪುಟದಲ್ಲಿ ಇದರ ಬಗ್ಗೆ ಯಾವರೀತಿಯಲ್ಲಿ ಕಾರ್ಯಾಚರಣೆ ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನು ತಕ್ಷಣ ವಿಚಾರ ಮಾಡಿ ಸಂಪುಟಕ್ಕೆ ವರದಿಯನ್ನು ಕೊಡಬೇಕು ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಪುಟದ ಉಪಸಮಿತಿಯನ್ನು ನೇಮಕ ಮಾಡಲಾಯಿತು. ಆ ಸಂಪುಟದ ಉಪಸಮಿತಿಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರು ಅಧ್ಯಕ್ಷರಾಗಿದ್ದಾರೆ, ನಾನು ಅದರಲ್ಲಿ ಸದಸ್ಯನಾಗಿದ್ದೇನೆ, ಶ್ರೀ ಎಸ್. ಬಂಗಾರಪ್ಪನವರು ಸದಸ್ಯರಾಗಿದ್ದಾರೆ, ಶ್ರೀ ಪುಟ್ಟಸ್ವಾಮಿಗೌಡರು,